**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **7**
ಸಿ.ಡಬ್ಲ್ಯೂ ನಂಃ **8**
ಸಾಕ್ಷಿಯನ್ನು ದಿನಾಂಕಃ **11-11-2024**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಸಾರೆಪ್ಪ
ತಂದೆಯ ಹೆಸರು ಃ ದೊಡ್ಡಗ್ಯಾನಪ್ಪ
ವಯಸ್ಸು ಃ **28** ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ನೆಲೋಗಿಪುರ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಚಾಸಾ **9** ನನ್ನ ಹೆಂಡತಿ. ನಮ್ಮ ಮದುವೆ ದಿಃ **27-08-2019** ರಂದು ತಿಗರಿ ಗ್ರಾಮದ ಫಕೀರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆ ಸಮಾರಂಭದಲ್ಲಿ ಮಾಡಲು ನಿಶ್ಚಯಿಸಿದ್ದರು. ಸದರಿ ದೇವಸ್ಥಾನದಲ್ಲಿ ನಮ್ಮ ಮದುವೆಯನ್ನು ನೋಂದಾಯಿಸಿ ಚೀಟಿ ಪಡೆದುಕೊಂಡಿದ್ದೆವು. ಆ ದಿನಾಂಕದಂದು ನಮ್ಮನ್ನು ಸೇರಿದಂತೆ ಪರಿಶಿಷ್ಟ ಜಾತಿಗೆ ಸೇರಿದ **04** ಜೋಡಿಗಳಿಗೆ ಮದುವೆ ನಿಶ್ಚಯವಾಗಿತ್ತು. ಆ ಊರಿನ ಹಿರಿಯರು ಸದರಿ ದೇವಸ್ಥಾನದಲ್ಲಿ ನಮ್ಮ ಮದುವೆಗಳು ಮಾಡಿಸಲು ಆಕ್ಷೇಪಣೆ ಮಾಡಿ ನಿಮ್ಮ ಸಮುದಾಯ ಭವನದಲ್ಲಿ ಮಾಡಿಕೊಳ್ಳಿ ಎಂದು ಹೇಳಿದರು. ಮದುವೆ ನಿಮ್ಮ ಸಮುದಾಯ ಭವನದಲ್ಲಿ ಮಾಡಿಕೊಂಡು ಊಟ ಬೇಕಾದರೆ ಫಕೀರೇಶ್ವರ ಜಾತ್ರೆಯಲ್ಲಿ ಮಾಡಿ ಎಂದು ನಮಗೆ ಆ ಗ್ರಾಮದವರು ತಿಳಿಸಿದರು. ನಂತರ ನಮ್ಮ ಮದುವೆ ಅಂಬೇಡ್ಕರ ಭವನದಲ್ಲಿ ನೆರವೇರಿಸಿದರು.

**2).** ದೇವಸ್ಥಾನದ ಬಳಿ ಮದುವೆ ಮಾಡಿಸದೇ ಸಮುದಾಯ ಭವನದಲ್ಲಿ ಏಕೆ ಮದುವೆ ಮಾಡಿಸಿದಿರಿ ಎಂದು ನಮ್ಮ ಊರಿನವರು ತಿಗರಿ ಗ್ರಾಮದವರನ್ನು ಕೇಳಿದಾಗ ಜಾತಿಯ ಸಲುವಾಗಿ ನೀವು ಅಂಬೇಡ್ಕರ ಭವನದಲ್ಲಿಯೇ ಮಾಡಿಕೊಳ್ಳಿ ನಾವು ದೇವಸ್ಥಾನದ ಬಳಿ ಮಾಡುವುದಿಲ್ಲ ಎಂದು ತಿಗರಿ ಗ್ರಾಮದವರು ಬೈಯ್ದು

ಬೆದರಿಕೆ ಹಾಕಿದ್ದರು ಆದರೆ ಯಾವ ರೀತಿ ಬೆದರಿಕೆ ಹಾಕಿದರು ಎಂದು ಗೊತ್ತಿಲ್ಲ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳ ಪೈಕಿ ಆ ದಿನ ಕೆಲವರು ಆಕ್ಷೇಪಣೆ ಮಾಡಿದ್ದನ್ನು ನಾನು ನೋಡಿದೆ. ನನ್ನ ಮದುವೆ ಇದ್ದ ಕಾರಣ ಎಲ್ಲರನ್ನು ಆ ದಿನ ನೋಡಲು ಆಗಿರಲಿಲ್ಲ. ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮಾಡಿಕೊಂಡಿದ್ದಾರೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣಗಳನ್ನು ತಿಳಿಸದೇ ಇರುವುದರಿಂದ ಕೋರಿಕೆಯನ್ನು ತಿರಸ್ಕರಿಸಿ ಸಾಕ್ಷಿದಾರರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ